ಕೊರೆಯುತ್ತಿತ್ತು.

ಹೀಗಿರಲು ಮೇಷ್ಟ್ರು: ‘ಯಾರು ಮೀನು ತಿಂದು ಬಂದವರು? ನೀವಾಗಿ ಎದ್ದು ನಿಂತು ಹೇಳಿ’ ಎಂದು ಮತ್ತೊಮ್ಮೆ ಗುಡುಗಿದರು. ಗೋಪಾಲನತ್ತ ಬಿರುನೋಟ ಬೀರುತ್ತ ಹೇಳಿದ ಮಾತು ಆತನಲ್ಲಿ ಭಯ ಹುಟ್ಟಿಸಿತು. ಕೊನೆಗೆ ಮೇಷ್ಟ್ರು ಒಂದು ನಿರ್ಧಾರಕ್ಕೆ ಬಂದರು.

ಮೇಷ್ಟ್ರು ಕ್ಲಾಸಿನ ಹಿರಿಯ ವಿದ್ಯಾರ್ಥಿ ಲಕ್ಕೋಜಿಯಲ್ಲಿ ಹೇಳಿದರು: ‘ಲಕ್ಕೋಜಿ, ಯಾರು ವಾಸನೆ ಬರುತ್ತಿದ್ದಾರೆಂದು ನೀನು ಕಂಡುಹಿಡಿಯಬೇಕು’.

ಶುಭ್ರ ವಸ್ತ್ರಧಾರಿಯಾಗಿದ್ದ ಲಕ್ಕೋಜಿ ನೀಟಾಗಿ ಎಣ್ಣೆ ಹಾಕಿ ತಲೆಗೂದಲು ಬಾಚಿದ ಸ್ಫುರದ್ರೂಪಿ ಯುವಕ. ಆತ ನೋಡಿದರೆ ಯಾವುದೇ ಬ್ರಾಹ್ಮಣ ಯುವಕನಿಗಿಂತಲೂ ಕಡಿಮೆಯೇನಿಲ್ಲ. ದಷ್ಟಪುಷ್ಟವಾಗಿಯೂ ಇದ್ದ. ಆದರೆ ಮೇಷ್ಟ್ರ ಆದೇಶಕ್ಕೆ ಅವನು ಏನು ಮಾಡಬೇಕೆಂದು ತಿಳಿಯದೆ ಬೆಚ್ಚಿದ.

ಆತ ಎದ್ದು ನಿಂತ.

‘ನೀನು, ಗ್ರೌಂಡಿಗೆ ಹೋಗು. ಅಲ್ಲಿಗೆ ಒಬ್ಬೊಬ್ಬರೇ ಹೋಗಬೇಕು. ನೀನು ಅವರನ್ನು ಹತ್ತಿರದಿಂದ ಮೂಸಿ ನೋಡಬೇಕು’ ಎಂದು ಹೇಳಿದರು.



ವಿಧಿಯಿಲ್ಲದೆ ಲಕ್ಕೋಜಿ ಕ್ಲಾಸಿನಿಂದ ಹೊರಗಿಳಿದು ಗ್ರೌಂಡಿಗೆ ಹೋದ.

‘ಮೊದಲು ಹುಡುಗರು, ಆಮೇಲೆ ಹುಡುಗಿಯರು’ ಎಂದು ಮೇಷ್ಟ್ರು ಆದೇಶಿಸಿದರು.

ಹುಡುಗರು ಒಬ್ಬೊಬ್ಬರಾಗಿ ಗ್ರೌಂಡಿನಲ್ಲಿ ಲಕ್ಕೋಜಿಯಿದ್ದಲ್ಲಿಗೆ ಹೋದರು. ಲಕ್ಕೋಜಿ ಅವರನ್ನು ಹತ್ತಿರದಿಂದ ಬಗ್ಗಿ ಮೂಸಿದ. ನಂತರ ಗ್ರೌಂಡಿನ ಇನ್ನೊಂದು ದಿಕ್ಕಿನಲ್ಲಿ ಸಾಲಾಗಿ ನಿಲ್ಲುವಂತೆ ಮೇಷ್ಟ್ರು ಸೂಚಿಸಿದರು.

ಲಕ್ಕೋಜಿ ಮೂಸಿ ಬಿಟ್ಟ ಹದಿನಾರು ಜನ ಹುಡುಗರು ಸಾಲಾಗಿ ಗ್ರೌಂಡಿನಲ್ಲಿ ನಿಂತರು. ಈ ಸಾಲಿನಲ್ಲಿ ಗೋಪಾಲನೂ ಇದ್ದ. ಮೇಷ್ಟ್ರ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಯಾರ ಹೆಸರು ಹೇಳಲು ಲಕ್ಕೋಜಿಗೆ ತೋರಲಿಲ್ಲ. ಮೂಸಿದ ಹುಡುಗರ್‍ಯಾರೂ ವಾಸನೆ ಬರುವಂತೆ ಲಕ್ಕೋಜಿಗೆ ತೋಚಲಿಲ್ಲ. ಇನ್ನು ಹುಡುಗಿಯರ ಸರದಿ.

ಅಷ್ಟರಲ್ಲಿ ಮೇಷ್ಟ್ರು ಲಕ್ಕೋಜಿಯ ಸಮೀಪಕ್ಕೆ ಹೋದರು.

‘ಯಾರು ವಾಸನೆ ಬರುವವರು?’ ಲಕ್ಕೋಜಿ ನಿರುತ್ತರನಾದ. ಯಾರೂ ವಾಸನೆ ಬಾರದಿರುವಾಗ ಯಾರ ಹೆಸರನ್ನು ಹೇಳಲಿ. ಲಕ್ಕೋಜಿಗೆ ತಾನೇ ವಾಸನೆ ಬರುತ್ತಿರಬಹುದೆಂಬ ಗುಮಾನಿ ಮೇಷ್ಟ್ರಿಗೆ ಬಂದಿರಬಹುದೇ ಎಂಬ ಆತಂಕ ಕಾಡತೊಡಗಿತು. ಏನೇ ಆಗಲಿ ಈಗ ಸಮಸ್ಯೆಗೊಂದು ಪರಿಹಾರವೋ ಎಂಬಂತೆ ಲಕ್ಕೋಜಿ ಹೇಳಿದ: ‘ಗೋಪಾಲ ಸ್ವಲ್ಪ ವಾಸನೆ ಬರುತ್ತಾನೆ’

‘ಹೋ... ನೀನಲ್ಲವೇನು ಮೀನು ತಿಂದವನು? ನಿನಗೆ ಸ್ನಾನ ಮಾಡಿ ಬರುವುದಕ್ಕೇನೊ?’ ಎಂದು ಜೋರಾಗಿ ಎಲ್ಲರ ಮುಂದೆ ಗದರಿದರು. ಗೋಪಾಲ ಅವಮಾನದಿಂದ ಜೋರಾಗಿ ಅಳತೊಡಗಿದ.

‘ಹೋಗು, ನೀನು ಮನೆಗೆ ಹೋಗಿ ಸರಿಯಾಗಿ ಸ್ನಾನ ಮಾಡಿ ಬಟ್ಟೆ ಬದಲಿಸಿ ಬಾ’ ಎಂದು ಕಳುಹಿಸಿದರು.

ಗೋಪಾಲ ಅಳುತ್ತಾ ಗ್ರೌಂಡಿನಿಂದ ಹೊರ ನಡೆದ. ಮನೆಯಿಂದ ಶಾಲೆಗೆ ಹೊರಡುವುದೇ ಗೋಪಾಲನಿಗೆ ಇಷ್ಟವಿರಲಿಲ್ಲ. ಅಪ್ಪನ ಭಯಕ್ಕೆ ಆತ ಶಾಲೆಗೆ ಬಂದಿದ್ದ. ಅಪ್ಪ ಉಳುವಾಗ ಕೆಸರುಗದ್ದೆಯಲ್ಲಿ ಎತ್ತುಗಳ ಜೊತೆ ನಡೆಯುವುದು, ಅವುಗಳನ್ನು ಮೇಯಿಸುವ ಕೆಲಸಗಳಲ್ಲಿ ಖುಷಿಪಡುತ್ತಿದ್ದ. ಗೋಪಾಲನಿಗೆ ಶಾಲೆಯೆಂದರೆ ಅಷ್ಟಕಷ್ಟೆ. ಅಣ್ಣ ದಾಮೋದರ ಶಾಲೆಗೆ ಹೋಗದೆ ಗದ್ದೆ ಕೆಲಸಕ್ಕೆ ಹೋಗುತ್ತಿದ್ದ. ಅವನಂತೆ ಇವನಾಗಬಾರದು. ಇವನಾದರೂ ನಾಲ್ಕಕ್ಷರ ಕಲಿಯಲಿ ಎಂದು ಗೋಪಾಲನನ್ನು ಅವನ ಅಪ್ಪ ಅಮ್ಮ ಶಾಲೆಗೆ ಅಟ್ಟುತ್ತಿದ್ದರು. ಪ್ರತಿನಿತ್ಯ ಗೋಪಾಲ ಶಾಲೆಗೆ ಹೋಗುವುದಿಲ್ಲ ಎಂದು ರಾಗ ತೆಗೆಯುತ್ತಿದ್ದ. ಅಂದು ಸೋಮವಾರ ಬೆಳಿಗ್ಗೆ ಶಾಲೆಗೆ ಹೊರಡುವಾಗಲೂ ಗೋಪಾಲ ‘ಹೊಟ್ಟೆ ನೋಯುತ್ತಿದೆ’ ಎಂದು ಶಾಲೆ